## ಸಾರಂಗನನ್ನು ನೆನಪಿಸಿದ ಪಾಂಡುರಂಗ

‘ಆಗಲಿ ಬಿಡು.. ಗಾಳಿ ತಿಂದು, ನೀರು ಕುಡಿದು ಬದುಕೋಣ.. ಏನಾಗುತ್ತೆ..?’ ಜಂಪಯ್ಯನ ಅಚಲ ನಿರ್ಧಾರ ಇನ್ನು ಪರೀಕ್ಷಿಸುವುದು ವ್ಯರ್ಥವೆಂದು ಶಿವಯ್ಯನಿಗೆ ಮನದಟ್ಟಾಯಿತು. ತಮ್ಮ ನಿರ್ಧಾರವನ್ನೂ ಮರು ಪರಿಶೀಲನೆಗೆ ಮನಸ್ಸನ್ನು ಒಳಪಡಿಸುವಂತಾಯಿತು.

‘ಈ ಕಾಯನೂ ಇಲ್ಲಿ ಬಿಟ್ಟು ಹೋಗಲ್ಲ ಅಂದಿದ್ದಾನೆ.. ಅವನು ನನ್ನೊಂದಿಗೆ ಇದ್ದಾನೆ.. ನೀವು ಬೇಕಾದರೆ ಹೊರಡಿ.. ಹೇಗೂ ಮಳೆ ಈಗ ಕಮ್ಮಿ ಆಗಿದೆ.. ಸೇತುವೆ ತಲುಪಿದ್ರೆ ನಿಮ್ಗೆ ಯಾವುದಾದರೂ ಗಾಡಿ ಸಿಗಬಹುದು..’ ಎಂದ. ಶಿವಯ್ಯ ರತ್ನ ಮುಖ ಮುಖ ನೋಡಿಕೊಂಡರು. ಶಿವಯ್ಯ ಕಾಲೆಳೆದುಕೊಂಡು ತನ್ನ ಮನೆಯ ಕಡೆ ಹೆಜ್ಜೆ ಹಾಕಿದ. ರತ್ನ ಮೌನವಾಗಿ ಹಿಂಬಾಳಿಸಿದಳು.

ಒಮ್ಮೆ ಮಳೆ ನಿಂತ ಬಳಿಕ ಎಲ್ಲರೂ ಕೂಡಿ ನೀರಿನ ತೊಟ್ಟಿಯ ಕಡೆ ಹೆಜ್ಜೆ ಹಾಕಿದರು. ತುಸು ತಗ್ಗು ಪ್ರದೇಶದಲ್ಲಿ ಅದನ್ನು ತೋಡಿದ್ದರಿಂದ ನೀರು ಮೇಲೇರಿ ಬಂದು ತೊಟ್ಟಿಯನ್ನು ಮುಚ್ಚಿ ಹಾಕಿ ಅದರ ಸುಳಿವೇ ಇರದಂತೆ ಮಾಡಿತ್ತು. ಅವರ ಎಷ್ಟೋ ದಿನಗಳ ಪರಿಶ್ರಮವನ್ನು ಅದು ನುಂಗಿ ಹಾಕಿದಂತೆ ಮೇಲ್ನೋಟಕ್ಕೆ ಕಂಡರೂ ನೀರು ಶೇಖರಣೆಯ ಸಮಸ್ಯೆ, ಮಳೆಗಾಲದ ನಂತರ ಇರದು ಎಂಬ ಸಮಾಧಾನ ಪಡಬೇಕಾಯಿತು. ಕೃಷಿ ಜಾಗದಲ್ಲಿ ನೀರು ನಿಂತು, ಹಾಕಿದ್ದ ಸೊಪ್ಪಿನ ಸಾರವೆಲ್ಲಾ ನೀರಿನ ಮೇಲೆ ತೇಲುವಂತೆ ನಿಂತಿತ್ತು. ಮಳೆ ಸುರಿಯುತ್ತಿದ್ದರೂ ಲೆಕ್ಕಿಸದೇ, ನಿಂತ ನೀರು ಹರಿದು ಹೋಗಲು ಅಗೆದು ದಾರಿ ಮಾಡಿ ಕೊಟ್ಟರು. ಅಲ್ಲಲ್ಲಿ ಕುಣಿ ತೋಡಿ ನೀರು ಅಲ್ಲಲ್ಲಿ ಜಮೆಯಾಗಲು ಇಂಗುಗುಂಡಿ ತೋಡಿ ಕೊಟ್ಟರು. ಬದುಕಿನ ಹೋರಾಟವೋ, ಆತ್ಮಶಕ್ತಿಗೊಂದು ಸವಾಲೋ, ಹಿಮ್ಮೆಟ್ಟದೇ ಅವುಗಳಿಗೆ ಮುಖಾಮುಖಿಯಾಗಿ ನಿಂತಾಗ ಎಂಥ ಪ್ರತಿಕೂಲ ಸ್ಥಿತಿಗಳು ಗುಡ್ಡೆಯಾಗಿ ಕಾಣುವುದಿಲ್ಲ. ನಮ್ಮಲ್ಲಿ

